**ಸಾಕ್ಷಿಗೆ ದಿಃ 27.03.2025 ರಂದು ಪ್ರಮಾಣ ವಚನ ಭೋದಿಸಲಾಯಿತು**

**ಮುಂದುವರಿದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಎನ್ ವಿ ಎನ್ ವಕೀಲರಿಂದಃ**

ನಾನು ನನ್ನ ಮುಖ್ಯ ವಿಚಾರಣೆಯನ್ನು ಶಪಥ ಪತ್ರದ ಮುಖಾಂತರ ಸಲ್ಲಿಸಿದ್ದು ಅದರಲ್ಲಿ ಬರೆದಿರುವ ವಿಷಯಗಳು ಸರಿ ಇರುತ್ತದೆ.

ದಿಃ 21.12.2010 ರಂದು ನನ್ನ ಗಂಡ ಮಾರಪ್ಪರವರು ಬರೆದ ಮೃತ್ಯು ಪತ್ರವನ್ನು ನೋಡುತ್ತಿದ್ದು ಅದನ್ನು ನಿಪಿ-1 ಎಂದು ಗುರ್ತಿಸಲಾಯಿತು. ನನ್ನ ಗಂಡ ಮಾರಪ್ಪ ಇವರು ದಿಃ01.11.2013 ರಂದು ಮರಣ ಹೊಂದಿದ್ದು ಅವರ ಮರಣ ಪ್ರಮಾಣ ಪತ್ರವನ್ನು ನೋಡುತ್ತಿದ್ದು ಅದನ್ನು ನಿಪಿ-2 ಎಂದು ಗುರ್ತಿಸಲಾಯಿತು. ನನ್ನ ಆಧಾರ್ ಕಾರ್ಡ್ ಮತ್ತು ಓಟರ್ ಐಡಿ ಯ ದೃಡೀಕೃತ ನಕಲುಗಳನ್ನು ನೋಡುತ್ತಿದ್ದು ಅವುಗಳನ್ನು ಕ್ರಮವಾಗಿ ನಿಪಿ-3 ಮತ್ತು 4 ಎಂದು ಗುರ್ತಿಸಲಾಯಿತು. ನಾಲ್ಕು ಎಲ್ಕ್ಟ್ರಿಸಿಟಿ ಬಿಲ್ ಗಳನ್ನು ನೋಡುತ್ತಿದ್ದು ಅವುಗಳನ್ನು ಒಟ್ಟಾಗಿ ನಿಪಿ-5 ಎಂದು ಗುರುತಿಸಲಾಯಿತು. ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಆಸ್ತಿ ತೆರಿಗೆಯ ಕೈಬರಹದ ಹಾಗೂ ಕಂಪ್ಯೂಟರಿಕೃತ ರಶೀದಿಗಳನ್ನು ಒಟ್ಟಾಗಿ ನಿಪಿ-6 ಎಂದು ಗುರುತಿಸಲಾಯಿತು. ಅರ್ಜಿಯನ್ನು ಸಲ್ಲಿಸಿದ ನಂತರ ಕನ್ನಡ ಪ್ರಭದಲ್ಲಿ ನೀಡಿದ ಪೇಪರ್ ಪಬ್ಲಿಕೇಷನ್ ನೋಡುತ್ತಿದ್ದು ಅದನ್ನು ನಿಪಿ-7 ಎಂದು ಗುರ್ತಿಸಲಾಯಿತು.

**ಪಾಟೀ ಸವಾಲುಃ** ನಿಪಿ-7 ನೋಟಿಸಿನ ಪ್ರಕಾರ ಯಾವುದೇ ಎದುರುದಾರರು ಹಾಜರಾಗದೇ ಇದ್ದ ಕಾರಣ ಸಾಕ್ಷಿಯ ಪಾಟೀ ಸವಾಲು ಇರುವುದಿಲ್ಲ.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ್ದನ್ನು ಯಥಾವತ್ತಾಗಿ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

(ಕೆ. ಗುರುಪ್ರಸಾದ್)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.